# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 530 (611)
ಸದಸ್ಯರ ಹೆಸರು : ಶ್ರೀ ಶರವಣ ಟಿ.ಎ
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 11.12.2025
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು.

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ನಾರಾಯಣಪುರ ಅಣೆಕಟ್ಟು ಎತ್ತರ ಕಾಮಗಾರಿ ವಿಚಾರ ಯಾವ ಹಂತದಲ್ಲಿ ಇದೆ: ಈ ಕಾಮಗಾರಿ ಯಾವಾಗ ಆರಂಭವಾಗಲಿದೇ; | ನಾರಾಯಣಪುರ ಅಣೆಕಟ್ಟು ಎತ್ತರಿಸುವ ಪ್ರಸ್ತಾವನೆ ಇರುವುದಿಲ್ಲ. |
| (ಆ) | ಈ ಕಾಮಗಾರಿ ಜಾರಿಗೆ ಸರ್ಕಾರದ ಮುಂದೆ ಇರುವ ಅಡೆತಡೆಗಳೇನು; ಇದನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಉದ್ಭವಿಸುವುದಿಲ್ಲ. |
| (ಇ) | ಕೃಷ್ಣಾ ಎರಡನೇ ನ್ಯಾಯಮಂಡಳಿಯ ಶಿಫಾರಸ್ಸು ಅನುಸಾರ ರಾಜ್ಯದ ಪಾಲಿನ ಹೆಚ್ಚುವರಿ ನೀರು ಬಳಕೆಗೆ ಅಧಿಸೂಚನೆ ಜಾರಿಗೊಳಿಸಲು ಕೇಂದ್ರದ ಮೇಲೆ ಒತ್ತಡ ಹೇರಲು ಯಾವ ಕ್ರಮ ಅನುಸರಿಸಲಾಗಿದೆ? | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ಕ್ಕೆ ಹಂಚಿಕೆಯಾಗಿರುವ ನೀರಿನ ಬಳಕೆಗೆ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟವನ್ನು ಆರ್.ಎಲ್.519.60 ಮೀ. ನಿಂದ ಆರ್.ಎಲ್.524.256 ಮೀ.ಗೆ ಎತ್ತರಿಸುವುದಾಗಿದ್ದು, ಇದು ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪು ಕೇಂದ್ರ ಸರ್ಕಾರದಿಂದ ಹೊರಡಿಸುವ ಅಧಿಸೂಚನೆಗೆ ಒಳಪಟ್ಟಿದ್ದು, ಐತೀರ್ಪು ಇನ್ನೂ ಅಧಿಸೂಚನೆ ಆಗಬೇಕಾಗಿದೆ.<br><br>ದಿನಾಂಕ 16.09.2011ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪನ್ನು ಗೆಜೆಟ್ ಪ್ರಕಟಣೆ ಮಾಡದಂತೆ ಕೇಂದ್ರ ಸರ್ಕಾರಕ್ಕೆ ಆದೇಶಿಸಲಾಗಿದ್ದು, ಸದರಿ ತೀರ್ಪನ್ನು ಮಾರ್ಪಡಿಸುವಂತೆ ಕೋರಿ ರಾಜ್ಯ ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಮಧ್ಯಕಾಲೀನ ಅರ್ಜಿಗಳನ್ನು ಸಲ್ಲಿಸಿದೆ.<br><br>ಮುಂದುವರೆದು, ಕೃಷ್ಣಾ ನ್ಯಾಯಾಧೀಕರಣದ ಅಂತಿಮ ತೀರ್ಪನ್ನು ಗೆಜೆಟ್ ಅಧಿಸೂಚನೆ ಹೊರಡಿಸುವ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಮಾರ್ಪಡಿಸಲು ಸೂಕ್ತ ಅರ್ಜಿ/ಅಫಿಡವಿಟ್ ಸಲ್ಲಿಸುವಂತೆ ಹಾಗೂ ನಂತರ ನ್ಯಾಯಾಧೀಕರಣದ ಆದೇಶವನ್ನು ಪ್ರಕಟಿಸಲು ಅಗತ್ಯ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರವನ್ನು ನಿರಂತರವಾಗಿ ಕೋರಲಾಗುತ್ತಿದೆ. ಸದರಿ ವಿಷಯದ ಕುರಿತು ರಾಜ್ಯ ಸರ್ಕಾರವು ಎಲ್ಲಾ ಆಡಳಿತಾತ್ಮಕ ಹಾಗೂ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಜಸಂಇ 97 ಡಬ್ಲ್ಯೂಬಿಎಂ 2025

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ